# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 665 (609) |
| ಸದಸ್ಯರ ಹೆಸರು | : ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : 19-09-2022 |
| ಉತ್ತರಿಸುವ ಸಚಿವರು | : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಹಾಗೂ ಸಕಾಲ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಶಿಕ್ಷಣ ಇಲಾಖೆಯಿಂದ 6ನೇ ತರಗತಿಯಿಂದ 8ನೇ ತರಗತಿವರೆಗೆ ಶಿಕ್ಷಕರ ನೇಮಕಾತಿಗಾಗಿ 2014 ರಿಂದ 2021ರವರೆಗೆ ಸರ್ಕಾರವು ಎಷ್ಟು ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ; | ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ 2014-2021ರವರೆಗೆ ಒಟ್ಟು 9642 ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು. (6 ರಿಂದ 8ನೇ ತರಗತಿ) ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ. |
| ಆ. | ಈ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಇರುವ ಮಾನದಂಡಗಳೇನು; ಒಟ್ಟು ಶಿಕ್ಷಕರ ಸಂಖ್ಯೆ ಎಷ್ಟು; ಹಾಲಿ ತುಂಬಿರುವ ಸಂಖ್ಯೆ ಎಷ್ಟು; ಉಳಿದಿರುವ ಶಿಕ್ಷಕರ ಸಂಖ್ಯೆ ಎಷ್ಟು; | ಪದವೀಧರ ಪ್ರಾಥಮಿಕ ಶಾಲಾ (6 ರಿಂದ 8ನೇ ತರಗತಿ) ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಸಾಮಾನ್ಯ ಅಭ್ಯರ್ಥಿಗಳು ಪದವಿಯಲ್ಲಿ ಒಟ್ಟಾರೆಯಾಗಿ ಶೇ. 50ರಷ್ಟು ಅಂಕಗಳನ್ನು ಪಡೆದಿರಬೇಕು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-I, ಇತರೆ ಹಿಂದುಳಿದ ವರ್ಗಗಳ ಅಥವಾ ಅಂಗವಿಕಲ ಅಭ್ಯರ್ಥಿಗಳ ಪ್ರಕರಣದಲ್ಲಿ ಶೇ45ರಷ್ಟು ಅಂಕಗಳನ್ನು ಪದವಿಯಲ್ಲಿ ಪಡೆದಿರಬೇಕು ಹಾಗೂ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿಬೇಕು (TET) ಮತ್ತು ಸ್ಪರ್ಧಾತ್ಮಕ ಪರೀಕ್ಷೆಯ ಪತ್ರಿಕೆ-2ರಲ್ಲಿ ಕನಿಷ್ಠ ಶೇ. 45% ಹಾಗೂ ಪತ್ರಿಕೆ-3ರಲ್ಲಿ ಕನಿಷ್ಠ ಶೇ. 50% ರಷ್ಟು ಅಂಕ ಪಡೆಯಬೇಕಾಗಿರುತ್ತದೆ.<br>ಈ ವೃಂದದಲ್ಲಿ ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ:51781.<br>ಹಾಲಿ ತುಂಬಿರುವ ಹುದ್ದೆಗಳ ಸಂಖ್ಯೆ: 11,359<br>ಉಳಿದಿರುವ ಶಿಕ್ಷಕರ ಸಂಖ್ಯೆ: 40,422 |

| | | |
|---|---|---|
| ಇ. | ಖಾಲಿ ಉಳಿದಿರುವ ಶಿಕ್ಷಕರನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | • ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ದಿನಾಂಕ:31-01-2021ರ ಅಂತ್ಯಕ್ಕೆ ಖಾಲಿಯಿದ್ದ 25,813 ಹುದ್ದೆಗಳ ಪೈಕಿ 15,000 ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಸರ್ಕಾರದ ಪತ್ರ ಸಂಖ್ಯೆ: ಇಪಿ 89 ಪಿಬಿಎಸ್ 2021 ದಿನಾಂಕ: 03.02.2022ರಂದು (ಕಲ್ಯಾಣ ಕರ್ನಾಟಕದ 5000 ಹುದ್ದೆಗಳು ಹಾಗೂ ಉಳಿಕೆ ಮೂಲ ವೃಂದದ 10000 ಹುದ್ದೆಗಳಿಗೆ) ಅನುಮತಿ ನೀಡಲಾಗಿದೆ.<br>• ಅದರಂತೆ, ದಿನಾಂಕ:21-03-2022ರಂದು 35 ಜಿಲ್ಲೆಗಳ ನೇಮಕಾತಿ ಪ್ರಾಧಿಕಾರಿಗಳು ಹಾಗೂ ಉಪನಿರ್ದೇಶಕರು(ಆಡಳಿತ) ಅಧಿಸೂಚನೆ ಹೊರಡಿಸಿ ದಿನಾಂಕ:21-05-2022ರಂದು ಮತ್ತು 22-05-2022ರಂದು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲಾಗಿದ್ದು. ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br>• ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (6 ರಿಂದ 8ನೇ ತರಗತಿ) ವೃಂದಕ್ಕೆ ಸೇವಾ ನಿರತರ ಕೋಟಾದಿಂದ (1 ರಿಂದ 5ನೇ ತರಗತಿ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಿಂದ) 60:40 ಅನುಪಾತದ ಆಧಾರದ ಮೇಲೆ ಪರೀಕ್ಷೆಯ ಹೊರತಾಗಿ ಸೇವಾ ಜೇಷ್ಠತೆಯನ್ನು ಪರಿಗಣಿಸಿ ಬಡ್ತಿ ನೀಡುವ ಕುರಿತು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. |

**ಸಂಖ್ಯೆ: ಇಪಿ 66 ಪಿಎಂಎ 2022**

(ಬಿ.ಸಿ. ನಾಗೇಶ್)

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಹಾಗೂ**

**ಸಕಾಲ ಸಚಿವರು**